# ಕಾಂಗ್ರೆಸ್ ಸದಸ್ಯರ ವಿರುದ್ಧ ಕ್ರಮಕ್ಕೆ ಆಗ್ರಹ

**ಬೆಂಗಳೂರು:** ಸಭಾಪತಿ ಪೀಠದ ಮೇಲೆ ಕುಳಿತು ಸಾಂವಿಧಾನಿಕ ಹುದ್ದೆಯನ್ನು ಅಪವಿತ್ರಗೊಳಿಸಿದ ಹಾಗೂ ಉಪ ಸಭಾಪತಿ ಮೇಲೆ ಹಲ್ಲೆ ನಡೆಸಿದ ಕಾಂಗ್ರೆಸ್ ಸದಸ್ಯರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಆಗ್ರಹಿಸಿದ್ದಾರೆ.

ಈ ಸಂಬಂಧ ಸಭಾಪತಿ ಪ್ರತಾಪ ಚಂದ್ರಶೆಟ್ಟಿ ಅವರಿಗೆ ಕಳೆದ ಮಂಗಳವಾರದ ಘಟನೆಯನ್ನು ಉಲ್ಲೇಖಿಸಿ ಮೂರು ಪುಟಗಳ ಪತ್ರ ಬರೆದಿರುವ ಅವರು, 'ಸದನದಲ್ಲಿ ನಡೆದ ಘಟನೆಗಳು ಅಕ್ಷಮ್ಯ ಮಹಾಪರಾಧ ಅನಿಸುವುದಿಲ್ಲವೇ? ಈ ಪ್ರಕರಣದ ಮೂಲದಲ್ಲಿ ನೀವು ಕಾರಣರಾಗಿದ್ದೀರಿ, ನಿಮ್ಮಿಂದ ಇದೆಲ್ಲಾ ನಡೆಯಲು ಕಾರಣವಾಯಿತು ಎಂದು ನಿಮ್ಮ ಮನಸಾಕ್ಷಿ ಹೇಳುತ್ತಿಲ್ಲವೇ, ಈಗಲಾದರೂ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿ ಸ್ಥಾನ ತೆರವುಗೊಳಿಸುವುದು ಸೂಕ್ತ,' ಎಂದು ಎಂದಿದ್ದಾರೆ.



ಆಯನೂರು ಮಂಜುನಾಥ್

'ಸಾಂವಿಧಾನಿಕ ಹುದ್ದೆಯನ್ನು ಅಪವಿತ್ರಗೊಳಿಸಿದ ಕಾಂಗ್ರೆಸ್‌ನ ನಾರಾಯಣಸ್ವಾಮಿ, ಚಂದ್ರಶೇಖರ ಬಿ.ಪಾಟೀಲ್, ಶ್ರೀನಿವಾಸ ಮಾನೆ, ಉಪ ಸಭಾಪತಿಯವರ ಮೇಲೆ ಎರಗಿ ಕೊರಳುಪಟ್ಟಿಗೆ ಕೈ ಹಾಕಿ ಎಳೆದೊಯ್ದ ನಾರಾಯಣಸ್ವಾಮಿ, ನಜೀರ್ ಅಹಮದ್, ಪ್ರಕಾಶ್ ರಾಥೋಡ್ ಮತ್ತಿತರರ ಮೇಲೆ ಕ್ರಮ ಕೈಗೊಳ್ಳುವ ಮೂಲಕ ಈ ರೀತಿಯ ವರ್ತನೆ ಸಹಿಸಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ಈಗಿನ ಸದಸ್ಯರು ಹಾಗೂ ಮುಂದಿನ ಪೀಳಿಗೆಯ ಶಾಸಕರಿಗೆ ನೀಡಬೇಕಾಗಿದೆ. ನೀವಾಗಲಿ, ಬೇರೆಯಾರೇಯಾಗಲಿ ಆ ಸ್ಥಾನದಲ್ಲಿ ಕುಳಿತವರು ಕ್ರಮ ಕೈಗೊಳ್ಳಬೇಕಿರುವುದು ಅನಿವಾರ್ಯ,' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ನೀವು ಸಭಾಪತಿ ಸ್ಥಾನದ ಘನತೆ ಗೌರವ ಕಾಪಾಡುವುದರ ಬದಲು ನಿಮ್ಮ ಸ್ಥಾನ ಕಾಪಾಡಿಕೊಳ್ಳಲು ಪ್ರಯತ್ನಿಸಿದ್ದು ದುರ್ದೈವದ ಸಂಗತಿ. ಕುರ್ಚಿಗಾಗಿ ಇಷ್ಟೊಂದು ಬದಲಾಗುವ ಅಪ್ರಾಮಾಣಿಕರಾಗುವ ಅವಶ್ಯಕತೆ ಇತ್ತೇ? ನಿಮ್ಮನ್ನು ನೀವೇ ಆತ್ಮಾವಲೋಕನ ಮಾಡಿಕೊಳ್ಳಿ. ನಿಮ್ಮ ಈ ವರ್ತನೆಯ ಕಾರಣದಿಂದ ಏನೆಲ್ಲಾ ನಡೆದು ಹೋಯಿತು, ಪರಿಷತ್ತಿನ ಕುಪ್ರದಾಖಲೆಯಲ್ಲಿ ಕರಾಳ ಅಧ್ಯಾಯ ಒಂದು ಆರಂಭವಾಯಿತು, ಅದರ ಕೇಂದ್ರ ಬಿಂದು ನೀವೇ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಡಿ.13ರ ಪತ್ರದ ಕೋರಿಕೆಯಂತೆ ಡಿ.15ರ ಕಾರ್ಯಕಲಾಪದ ಪಟ್ಟಿಯಲ್ಲಿ ಅವಿಶ್ವಾಸ ಸೂಚನೆಯ ವಿಷಯ ಸೇರಿಸಿ ನೀವು ಪೀಠದಿಂದ ದೂರ ಉಳಿದು ಸತ್‌ಸಂಪ್ರದಾಯ ಮುಂದುವರಿಸುವ ಸುವರ್ಣ ಅವಕಾಶ ನಿಮ್ಮ ಪಾಲಿಗಿತ್ತು. ಆದರೆ ನೀವು ಅದನ್ನು ಕಳೆದುಕೊಂಡು ಬಿಟ್ಟಿರಿ. ಅದಕ್ಕೆ ನೀವು ನೀಡಿದ ಕಾಣಿಕೆ ಕರಾಳ ಅಧ್ಯಾಯಕ್ಕೆ ಬರೆದ ಮುನ್ನುಡಿ,' ಎಂದು ಆಯನೂರು ಮಂಜುನಾಥ್ ಅವರು ಸಭಾಪತಿಗಳನ್ನು ದೂರಿದ್ದಾರೆ.